ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ. ದಿನಾಂಕಃ **25.10.2023**

ಮುಖ್ಯ ವಿಚಾರಣೆಃ ಶ್ರೀ ಹೆಚ್ ಸಿ ಎಂ ಕೆ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರ ಹಾಜರುಪಡಿಸಿದ್ದು, ಅದರಲ್ಲಿ ಬರೆದಿರುವುದು ಸತ್ಯವಿರುತ್ತದೆ. ನಾನೆ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ.

ಈ ಕೇಸಿನಲ್ಲಿ ಹಾಜರು ಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ವಂಶವೃಕ್ಷ ಪ್ರಮಾಣ ಪತ್ರವನ್ನು ನಿಪಿ-1 ಎಂದು, 2 ಆರ್ ಟಿ ಸಿ ಗಳನ್ನು ನಿಪಿ-2 ಮತ್ತು 3 ಎಂದು, ಮ್ಯುಟೇಷನ್ ರಿಜಿಸ್ಟರ್ ನ ಎಕ್ಸ್ಟ್ರಾಕ್ಟ್ ನ ದೃಢೀಕೃತ ನಕಲನ್ನು ನಿಪಿ-4 ಎಂದು, 1925 ರಿಂದ 1930 ರ ವರೆಗಿನ ಜಮಾ ಬಂಧಿಯ ನಕಲನ್ನು ನಿಪಿ-5 ಎಂದು, 1935 ರಿಂದ 1940 ರ ವರೆಗಿನ ಜಮಾ ಬಂಧಿಯ ನಕಲನ್ನು ನಿಪಿ-6 ಎಂದು, 1941 ರಿಂದ 1946 ರ ವರೆಗಿನ ಜಮಾ ಬಂಧಿಯ ನಕಲನ್ನು ನಿಪಿ-7 ಎಂದು, 1951 ರಿಂದ 1956 ರ ವರೆಗಿನ ಜಮಾ ಬಂಧಿಯ ನಕಲನ್ನು ನಿಪಿ-8 ಎಂದು, 1958 ರಿಂದ 1970 ರ ವರೆಗಿನ ಜಮಾ ಬಂಧಿಯ ನಕಲನ್ನು ನಿಪಿ-9 ಎಂದು, 1941 ರಿಂದ 1946 ರ ವರೆಗಿನ ಜಮಾ ಬಂಧಿಯ ನಕಲನ್ನು ನಿಪಿ-10 ಎಂದು, 1930 ರಿಂದ 1935 ರ ವರೆಗಿನ ಜಮಾ ಬಂಧಿಯ ನಕಲನ್ನು ನಿಪಿ-11 ಎಂದು, 1979 ರಿಂದ 2001 ರ ವರೆಗಿನ ಜಮಾ ಬಂಧಿಯ ನಕಲನ್ನು ನಿಪಿ-12 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿರುತ್ತಾರೆ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.